**<u>ದಿನಾಂಕಃ 10-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಎಸ್.ವಿ.ಜಿ. ವಕೀಲರಿಂದಃ</u>**

**16**. ಸಾಕ್ಷಿ ನುಡಿಯಲು ನನಗೆ ವಾದಿ ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿ. ವಾದಿಯು ನನಗೆ ಸಂಬಂಧಿಕನು ಆಗಬೇಕು. ವಾದಿಯು ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೇಲ್ಡಿಂಗ್ ಕೆಲಸ ಮಾಡಿಕೊಂಡಿರುತ್ತೇನೆ. ವಾದಿಯು ಮೀನಿನ ಅಂಗಡಿಯನ್ನು ಇಟ್ಟುಕೊಂಡಿರುತ್ತಾನೆ. ವಾದಿಯು ರಾಜಕೀಯ ವ್ಯಕ್ತಿ ಆಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ರಾಜ್ಯ ಜವಳಿ ಮೂಲ ಸೌಕರ್ಯದ ಉಪಾಧ್ಯಕ್ಷರು ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ.

17. ವಾದಿಗೆ ಎಷ್ಟು ವಯಸ್ಸು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ರಾಜ್ಯ ಜವಳಿ ಮೂಲ ಸೌಕರ್ಯದ ಉಪಾಧ್ಯಕ್ಷರು ಆಗಿದ್ದಾಗ ನಗರಸಭೆಯ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯು ತಾವು ಹುಟ್ಟುವ ಮುಂಚೆ ತನಗೆ ಆಸ್ತಿ ಬಂದಿರುತ್ತದೆ ಎಂದು ದಾಖಲಾತಿಯನ್ನು ಸೃಷ್ಟಿಸಿ ಕಾರಣ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ಪ್ರತಿಕೆಯಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

18. ವಾದಿಗೆ ದಾಖಲಾತಿಯನ್ನು ಸೃಷ್ಟಿಸುವ ರೂಡಿಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಯಾರ ಮಾಲ್ಕಿ ಆಸ್ತಿ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಲು ರಾಮ ಮಾಂಗರವರು ತಿಳಿಸಿರುತ್ತಾರೆ. ದಾವಾ ಆಸ್ತಿಯ ಕಾಗದ ಪತ್ರವನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿ ಜಮಖಂಡಿಯಿಂದ ಎಷ್ಟು ದೂರದಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

19. ದಾವಾ ಆಸ್ತಿಯ ಮಾರಾಟ ಮಾಡುತ್ತಿರುವ ಬಗ್ಗೆ ಮಾತುಕತೆ 1 ನೇ ಪ್ರತಿವಾದಿಯ ಜೊತೆ ಆಗಿರುತ್ತದೆ. ದಿಃ 28.10.2006 ರಲ್ಲಿ ಮಾತುಕತೆ ಆಗಿರುತ್ತದೆ. ಒಟ್ಟು 31 ಎಕರೆ 35 ಗುಂಟೆ

ಜಮೀನಿಗೆ 1,10,000/- ರೂಗಳಿಗೆ ಮಾತುಕತೆ ಆಗಿರುತ್ತದೆ. ಮಾತುಕತೆ ಆದ ದಿನ ಹಣ ನೀಡಿರುವುದಿಲ್ಲ. 2 ದಿನಗಳ ನಂತರ ಹಣ ನೀಡಿರುತ್ತೇವೆ. ಸದರಿ ಹಣವನ್ನು ಮೀನಿನ ಅಂಗಡಿಯಲ್ಲಿ ನೀಡಿರುತ್ತೇವೆ. ಆ ಸಮಯದಲ್ಲಿ ನಾನು, ಬಾಬು ನಾಗರಾಳ, ರಮೇಶ ಮೋರೆ, ರಾಮು ಮಾಂಗ್, 1ನೇ ಪ್ರತಿವಾದಿ ಹಾಜರಿದ್ದರು. 1ನೇ ಪ್ರತಿವಾದಿಗೆ ಜಮೀನು ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮಾತುಕತೆ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ 1ನೇ ಪ್ರತಿವಾದಿಯ ಬಳಿ ಯಾವ ದಾಖಲಾತಿ ಇತ್ತು ಎಂದು ನನಗೆ ಗೊತ್ತಿಲ್ಲ. ಬಾಂಡ ಅಂಗಡಿಯಲ್ಲಿ ಬಾಂಡ ಮಾಡಲಾಗಿರುತ್ತದೆ. ಸದರಿ ಬಾಂಡ ಅಂಗಡಿ ಹಳೆಯ ತಹಸೀಲ್ದಾರ ಕಛೇರಿಯ ಬಳಿ ಇರುತ್ತದೆ.

20. ಬಾಂಡನ್ನು ಅಂಗಡಿಯವರು ಬರೆದಿರುತ್ತಾರೆ. ಬಾಂಡ ಮಾಡುವ ದಿನ 80,000/- ಹಣ ನೀಡಲಾಗಿರುತ್ತದೆ. ಸದರಿ ದಿನ ಕ್ರಯ ಪತ್ರ ಮಾಡಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಪಹಣಿ ಪತ್ರಿಕೆಯಲ್ಲಿ ಇರುವ ಹೆಸರನ್ನು ಕಡಿಮೆ ಮಾಡಿಕೊಂಡು ಬರುತ್ತೇವೆ ಎಂದು ಹೇಳಿದ ಕಾರಣ ಕ್ರಯ ಪತ್ರ ಮಾಡಿರುವುದಿಲ್ಲ, ಯಾರ ಹೆಸರು ಇತ್ತು ಎಂದು ನನಗೆ ಗೊತ್ತಿಲ್ಲ. ಉತಾರೆಯನ್ನು ನಾನು ನೋಡಿರುವುದಿಲ್ಲ.

21. ಮುಳವಾಡ ಗ್ರಾಮದಲಿಲ ಸನ್ 2006 ರಲ್ಲಿ 1 ಎಕರೆ ಎಷ್ಟು ಹಣಕ್ಕೆ ಮಾರಾಟವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಜಮೀನನ್ನು ನಾನು ನೋಡಿರುವುದಿಲ್ಲ. ದಾವಾ ಜಮೀನು ಯಾವ ರೀತಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಮುಳವಾಡ ಗ್ರಾಮದಲ್ಲಿ ಇರುವ ಜಮೀನು ಎಕರೆಗೆ 2-3 ಲಕ್ಷ ರೂಗಳಿಗೆ ಮಾರಾಟವಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದವರು ಜಮೀನುಗಳನ್ನು ಸ್ವಾಧಿನಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

22. ವನ ಜಮೀನಕ್ಕೆ 1 ಎಕರೆಗೆ 7-8 ಲಕ್ಷ ರೂಗಳಿಗೆ ಮತ್ತು ನೀರಾವರಿ ಜಮೀನಕ್ಕೆ 1 ಎಕರೆ 9 ಲಕ್ಷ ರೂಗಳಿಗೆ ನಿಗಧಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪರಿಹಾರದ ಹಣವನ್ನು ಪಡೆದುಕೊಳ್ಳುವ ಉದ್ದೇಶದಿಂದ ನಾನು ಮತ್ತು ವಾದಿ ಮತ್ತು ಸಾಕ್ಷಿದಾರರು ಸೇರಿ ಖೊಟ್ಟಿ ದಾಖಲಾತಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**